**3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.**

**<u>ಸಿ.ಸಿ.ನಂ.542/2019</u>**

ದಿನಾಂಕಃ **29.12.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು ಃ | ಎಂ.ಮಲ್ಲೇಶಪ್ಪ | ಚಾಸಾ-9, ಪ್ರಾಸ.-8 |
| ತಂದೆಯ ಹೆಸರುಃ | ಹನುಮಂತಪ್ಪ | |
| ವಯಸ್ಸು ಃ | 43 ವರ್ಷ | |
| ಉದ್ಯೋಗ ಃ | ವ್ಯವಸಾಯ | |
| ವಾಸ ಃ | ಜೋಡಿತಿಮ್ಮಾಪುರ ಗ್ರಾಮ | |

<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>

ಚಾಸಾ-2 ಮತ್ತು 8 ರವರು ನನಗೆ ಗೊತ್ತು. ಮೃತ ವ್ಯಕ್ತಿ ನನಗೆ ಗೊತ್ತು. ಸುಮಾರು 8 ವರ್ಷಗಳ ಹಿಂದೆ ಅಂದರೆ 2017 ರಲ್ಲಿ ಕಾಂತರಾಜುರವರಿಗೆ ಬೀರೂರಿನ ಬಿ.ಜಿ.ಎಸ್. ಶಾಲೆಯ ಹತ್ತಿರ ಲಾರಿ ಅಪಘಾತವಾಗಿರುತ್ತದೆ. ಈ ವಿಚಾರಕ್ಕೆ ಸಂಬಂಧಪಟ್ಟಂತೆ ಪೊಲೀಸರು ದೂರು ದಾಖಲಿಸಿ ಕೃತ್ಯ ನಡೆದ ಸ್ಥಳ ಮತ್ತು ಅಮಾನತ್ತು ಮಹಜರಿಗೆ ಪೊಲೀಸರು ನನ್ನನ್ನು ಮತ್ತು ಚಾಸಾ-8 ರವರನ್ನು ಕರೆದಿದ್ದು, ನಮ್ಮಗಳ ಸಮಕ್ಷಮ ಚಾಸಾ-2 ರವರು ತೋರಿಸಿದ ಸ್ಥಳದಲ್ಲಿ ಬೆಳಿಗ್ಗೆ 08.00 ರಿಂದ 09.00 ರ ಸಮಯದಲ್ಲಿ ಸ್ಥಳ ಮಹಜರನ್ನು ಜರುಗಿಸಿ ಭಾವಚಿತ್ರಗಳನ್ನು ತೆಗೆದಿರುತ್ತಾರೆ. ನಂತರ ಬೀರೂರು ಠಾಣೆಗೆ ಹೋಗಿ ಚಾಸಾ-2 ರವರು ತೋರಿಸಿದ ವಾಹನವಾದ ಲಾರಿಯನ್ನು ಪೊಲೀಸರು 10-00 ರಿಂದ 11-00 ಗಂಟೆಯವರೆಗೆ ಮಹಜರ ಕ್ರಮ ಜರುಗಿಸಿ ವಾಹನವನ್ನುಅಮಾನತ್ತು ಪಡಿಸಿಕೊಂಡಿರುತ್ತಾರೆ ಹಾಗೂ ಭಾವಚಿತ್ರವನ್ನು ತೆಗೆದಿರುತ್ತಾರೆ. ಸಾಕ್ಷಿಯು ಈಗಾಗಲೇ ಗುರುತಿಸಲಾದ ನಿಪಿ-6 ನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-6(ಬಿ) ಎಂದು ಗುರುತಿಸಲಾಯಿತು. ಸ್ಥಳ ಮಹಜರ ಸಮಯದಲ್ಲಿ ತೆಗೆಯಲಾದ ನಿಪಿ-7 ರ ಭಾವಚಿತ್ರವನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನಿಪಿ-8 ರ ಅಮಾನತ್ತು ಮಹಜರಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-8(ಬಿ) ಎಂದು ಗುರುತಿಸಲಾಯಿತು. ಅಮಾನತ್ತು ಸಮಯದಲ್ಲಿ ತೆಗೆಯಲಾದ ಭಾವಚಿತ್ರಗಳನ್ನು ಈಗಾಗಲೇ ಗುರುತಿಸಲಾದ ನಿಪಿ-2 ನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ನಿಪಿ-6 ಮತ್ತು 8 ಕ್ಕೆ ನಾನು ಮತ್ತು ಚಾಸಾ-2 ಮತ್ತು 8 ರವರು ಸಹಿ ಮಾಡಿರುತ್ತೇವೆ.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ಅವರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು)**

ಪಾಟೀಸವಾಲುಃ ಮಾನ್ಯ ಸಸಅ. ರವರಿಂದ ಃ

ದಿಃ24.08.2017 ರಂದು ಕಾಂತರಾಜುರವರಿಗೆ ಅಪಘಾತವಾಗಿದ್ದು ಈ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕಃ 25.08.2017 ರಂದು ನನಗೆ ಮತ್ತು ಚಾಸಾ-8 ರವರಿಗೆ ಮಹಜರಗೆ ಪಂಚರಾಗಿ ಸಹಕರಿಸುವಂತೆ ಕೋರಿ ನೋಟೀಸು ನೀಡಿರುತ್ತಾರೆ. ಅಪಘಾತ ಪಡಿಸಿದ ವಾಹನವಾದ ಟಿಎನ್-34/ಕ್ಯೂ-6710 ರ ಅಶೋಕ್ ಲೇ ಲ್ಯಾಂಡ್ 10 ಚಕ್ರದ ವಾಹನವನ್ನು ನಿಪಿ-8 ರ ಮಹಜರ ಕ್ರಮವನ್ನು ಜರುಗಿಸಿ ಅಮಾನತ್ತು ಪಡಿಸಿಕೊಂಡಿರುತ್ತಾರೆ.

ಪಾಟೀಸವಾಲುಃ ಶ್ರೀ ವೈ.ಟಿ.ಎಂ., ಆರೋಪಿ ಪರ ವಕೀಲರಿಂದಃ

ಮಹಜರಿಗೆ ಹಾಜರಾಗುವಂತೆ ಪೊಲೀಸರು ನೋಟೀಸು ಜಾರಿ ಮಾಡಿರುತ್ತಾರೆ. ನಿಪಿ-6 ಮತ್ತು 8 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ, ಸಾಕ್ಷಿ ಮುಂದುವರಿದು ನಾನು ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನೋಟಿಸನ್ನು ಯಾವ ದಿನಾಂಕದಂದು ನೀಡಿರುತ್ತಾರೆ ಎಂದು ನನಗೆ ಹೇಳಲಾಗುವುದಿಲ್ಲ. ಚಾಸಾ- 1 ರಿಂದ 8 ಮತ್ತು 10 ರಿಂದ 12 ರವರು ಎಲ್ಲರೂ ನಮ್ಮ ಊರಿನವರು ಎಂದರೆ ಸರಿ. ಅವರುಗಳು ಸಂಬಂಧಿಕರು ಎಂದರೆ ಸರಿಯಲ್ಲ. ಅಪಘಾತದ ದಿನಾಂಕ ಮತ್ತು ವಾಹನ ಸಂಖ್ಯೆಯನ್ನು ನನಗೆ ಹೇಳಲು ಆಗುವುದಿಲ್ಲ. ಅಪಘಾತವನ್ನು ನಾನು ಖುದ್ದಾಗಿ ನೋಡಿರುವುದಿಲ್ಲ ಎಂದರೆ ಸರಿ. ನನ್ನ ಸಮಕ್ಷಮ ಯಾವುದೇ ಮಹಜರ ಕ್ರಮ ಜರುಗಿಸಿಲ್ಲ ಮತ್ತು ಯಾವುದೇ ವಾಹನವನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.